Regd No BG 155

— ೫೧ —

28—4—1961

Sri
" SATYA VADI "
— DAILY —
MYSORE 4
45 th Year

Protect the cow

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಅವಶ್ಯಕೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಬೆಂಗಳೂರಿಗೆ ೧ ಪೈಸೆ

ಸ್ಥಾಪಕರು— ಅರಮನೆ ಸಂಸ್ಥೇದಾರ್ ಎಸ್. ಎ ಸುಬ್ಬರಾಯರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಕಾಂಗ್ರೆಸ್ ಉಪ ನಾಯಕ ಚುನಾವಣೆ ಮುಂದೆಹೋಗುವ ಸಂಭವ

ನವ ದೆಹಲಿ 27 — ಕಾಂಗ್ರೆಸು ಪಾರ್ಲಿಮೆಂಟರಿ ಪಕ್ಷದ ಉಪ ನಾಯಕ ಚುನಾವಣೆಯನ್ನು ಮುಂದು ವರಿಸುವ ಪ್ರಯತ್ನ ಇದೆಯೆಂದೂ, ತುಕ್ಕ ವಾಂ ಸಮಾವೇಶವಾಗುವ ಪಕ್ಷದ ಕಾರ್ಯಕಾರಿ ಸಮಿತಿ ಇದನ್ನು ಪರಿಶೀಲನೆ ಮಾಡಿ ತದನಂತರವಷ್ಟೇ ಗೊತ್ತಾಗಿದೆ. " ಪಕ್ಷ ಹಾಗೂ ದೇಶದ ಹಿತದೃಷ್ಟಿಯಿಂದ " ಉಪ ನಾಯಕ ಚುನಾವಣೆಯನ್ನು ಮುಂದುವರಿಸಬೇಕೆಂದು ಕೆಲವು ಪ್ರಭಾವಶಾಲಿ ವ್ಯಕ್ತಿಗಳು ಪಕ್ಷದ ನಾಯಕರಿಗೆ ಮನವಿ ಅರ್ಪಿಸಲು ಸಹ ಮಾಡಿರುವುದು 62 ರ ಮಹಾ ಚುನಾವಣೆ ಮುಗಿವ ವರೆಗೆ ಉಪ ನಾಯಕ ಚುನಾವಣೆ ಮುಂದುವರಿಯಬೇಕೆಂಬ ಸಲಹೆ ಇದೆ.

ಭಾರತದ ಒಪ್ಪಿಗೆ

ಮುಂದಿನ ಮಾಹೆ 12 ರಂದು ಜಿನೀವಾದಲ್ಲಿ ಸಮಾವೇಶವಾಗುವ ಅಣೋಸಿನ ವಿಷಯದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಭಾರತ ಒಪ್ಪಿದೆ

ಬಿಡುಗಡೆಗೆ ಮನವಿ

ನವ ದೆಹಲಿ 27 — ಕೊಕ್ಕಿತವಿಲೆಯಲ್ಲಿ ಮೊಯಿಸೆ ಷೋಂಬೆಯವರಿಂದ ಬಂಧನದ ವಾರ್ತೆ ಗಾಧರಿಯನ್ನುಂಟು ಮಾಡಿದೆ ಷೋಂಬೆಯವರ ಬಿಡುಗಡೆಗಾಗಿ ನಿಮ್ಮ ಸೌಜನ್ಯವನ್ನು ಉಪಯೋಗಿಸಬೇಕು ಎಂದು ಕಟಾಂಗ ಪ್ರದ್ದಿ ಶಾಖೆಯ ಡೈರೆಕ್ಟರ್ ಜನರಲ್ ಎಂ. ಸ್ಟಬಿನೀಸರು ಎಶ್ವಶಂಸ್ಥೆಯ ಜನರಲ್ ಸೆಕ್ರೆಟರಿ ಡ್ಯಾಗ್ ಹ್ಯಾಮರ್ಷೀಲ್ಡ್‌ರವರಿಗೆ ತಂತಿ ಕಳಿಸಿರುವರು.

ಬಟಮಂಡು 27 — ನೇಪಾಳಕ್ಕೆ ಭಾರತ ಕೊಟ್ಟಿರುವ ನೆರವು ರೂ. 23.3 ಕೋಟಿಗಳು.

ಅಮೆರಿಕದ ಆತಂಕ

ವಾಷಿಂಗ್ಟನ್ 27 — ಲಾವೋಸಿನಲ್ಲಿ ಕದನ ಸಮಾಪ್ತಿ ಮಾಡುವ ಬಗ್ಗೆ ಶಡವಾಗುತ್ತಿರುವ ವಿಷಯದಲ್ಲಿ ಆತಂಕ ಹಾಗೂ ನಿರಾಶೆಯನ್ನು ಅಮೆರಿಕಾ ವ್ಯಕ್ತಪಡಿಸಿದೆ ಎಂದು ಸಂಸ್ಥಾನ ಇಲಾಖೆ ಪ್ರಕಟಿಸಿದೆ.

ಈ ದಿನ ಸಭೆ

ನವ ದೆಹಲಿ 27 — ಲಾವೋ ಬಗ್ಗೆ ಅಂತರರಾಷ್ಟ್ರ ಉಸ್ತುವಾರಿ ಹಾಗೂ ನಿಯಂತ್ರಣ ಸಮಿತಿ ಈ ದಿನ ಸಭೆ ಸೇರುವುದು.

ಉಪಗ್ರಹ ಬಿಡುಗಡೆ

ಷೇಕ್ ಟಿಲಿಸ್ಕೋಪ್ ಉಪಗ್ರಹವನ್ನು ಅವರಿಕಾ ನಿನ್ನೆ ಹಾರಿಸಿತೆಂದು ಕೇಪ್ ಕೆನವೆರಾಲ್ ವಾರ್ತೆ.

ರಿಮ್ಯಾಂಡ್

ಒಟಾವಾ 67 — ಭಾರತದ ಹೈ ಕಮಿಷನರು ಆಫೀಸಿನ ಶ್ರೀ ಶಂಕರಪಿಳ್ಳೆಯವರನ್ನು ಖೂನಿಮಾಡಿದ ಪಾನಿ ವಿಜಿಯನ್ನು ಒಂದು ವಾರ ರಿಮ್ಯಾಂಡು ಮಾಡಲಾಗಿತ್ತು.

★

ಲಂಡನ್ 27— ಪಶ್ಚಿಮ ಜರ್ಮನಿ ಸೈನ್ಯಕ್ಕೆ ಬ್ರಿಟನ್ನು ನೆಲವನ್ನು ನೀಡುವ ವಿಷಯದ ಬಗ್ಗೆ ರಷ್ಯಾ ಬ್ರಿಟನ್ ಗೆ ಪ್ರತಿಭಟನೆ ಸಲ್ಲಿಸಿದೆ.

ಪಾಳೆಯು ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿರಾಮಣಿ
ಸಂಪಶ್ಯಾಷ್ಟ ಜ್ಯೋಯಸರಿಂದ
29 ಶನಿವಾರ ಚತುರ್ದಶಿ ಚಿತ್ತ
ಶ್ರೀ ನೃಸಿಂಹ ಜಯಂತಿ

ವಿಧಾನ ಸಭೆ ಮುಂದಕ್ಕೆ

ಬೆಂಗಳೂರು 28— ಶಾಸನ ಸಭೆಯು ಅಯವ್ಯಯ ಅಧಿವೇಶನವು 48 ದಿನಗಳ ಸಂತರ ನಿನ್ನೆ ಅಡ್ಜರ್ನ್ ಮಾಡಲ್ಪಟ್ಟಿತು : ಬಹಳ ವರ್ಷಗಳಿಂದ ನಿಂತಿದ್ದ ಅನುವಂಶೀಯ ಗ್ರಾಮಾಧಿಕಾರಿಗಳ ಮಸೂದೆ ಮಂಜೂರಾದುದೂ ಒಂದು ಮುಖ್ಯ ವಿಷಯ ಇದು ರಾಜ್ಯದ 29೦೦೦ ಗ್ರಾಮಗಳ 8೮೦೦೦ ಮಂದಿಗೆ ಸಂಬಂಧಿಸಿದ್ದಾಗಿದೆ — ಪದಸ್ಥರು 194 ರಂತಾವು ಕಳಿಹಿಸಿದ್ದು 190 ಪ್ರವೇಶ ಪೂರಿತುದಾದರೂ 4 ಮಾತ್ರ ಚರ್ಚಿಸಲ್ಪಟ್ಟು ಕಿತ್ತು ಹಾಕಲ್ಪಟ್ಟವು ಅಥವಾ ವಾಪಸ್ಸು ತೆಗೆದುಕೊಳ್ಳಲ್ಪಟ್ಟವು ; ರಾಜ್ಯದ ಹೆಸರನ್ನು ಮೈಸೂರು ಬದಲು ಕರ್ನಾಟಕ ಎನ್ನ ಬೇಕೆಂಬ ಚರ್ಚಾಸ್ಪದ ಠರಾವು ಜುಲೈ ಸಭೆವರೆಗೆ ಮುಂದುವರಿಸಲಾಯಿತು.

ಹೆಚ್ಚು ದಂಡನೆ ವಿಧಿಸಲು

ಬೆಂಗಳೂರು 27— ಪಾಸನಿರೋಧ ಉಲ್ಲಂಘನೆ ಕಕ್ಷೀಕಾರರಿಗೆ ಹೆಚ್ಚು ಶಿಕ್ಷೆ ವಿಧಿಸಲು ಪಾಸನನಿರೋಧ ಶಾಸನಕ್ಕೆ ತಿದ್ದುಪಡಿ ತರಲು ಸರ್ಕಾರ ಯೋಚಿಸುತ್ತಿದೆ ಎಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು — 1958 ರಲ್ಲಿ 66517, 59 ರಲ್ಲಿ 68733, 60 ರಲ್ಲಿ 58853 ಮೊಖ ದ್ದಮೆ ಹೂಡಲಾಯಿತೆಂದೂ ತಿಳಿಸಲಾಯಿತು.

ಹದಿಮೂರು ಶಿಶುಗಳ ಮಗು

ಜೋಹನ್ಸಬರ್ಗ್ 27— ಕಾಲಕ್ಕೆ ಮೂರು ತಿಂಗಳಿಗೆ ಮುಂಚೆಯೇ ಶ್ವೇತ ಹೆಂಗಸಿಗೆ ಜನಿಸಿದ ಒಂದು ಮಗುವು 18 ಔನ್ಸುಗಳ ತೂಕ ಮಾತ್ರ ಇದೆ : ಇದನ್ನು ಆಕ್ಸಿಜನ್ ಟೆಂಟಿನಲ್ಲಿಟ್ಟು ಗ್ಲೂಕೋಸು ಮತ್ತು ಬ್ರಾಂಡಿ ಕೊಡಲಾಗುತ್ತಿದೆ.

ವಿವಿಧ ವಿಷಯಗಳು

ಲಿಸ್ಬನ್ 26— ದಕ್ಷಿಣ ಅಂಗೋಲದ ' ಬೇ ಆಫ್ ಎಲಿಫೆಂಟ್ಸ್ ' ನಲ್ಲಿಯು ವಾನು ಹಿಡಿಯುವ ಕೇಂದ್ರದಲ್ಲಿ ವಾಸಿಸುತ್ತಿರುವ ಎಲ್ಲ ಐರೋಪ್ಯರನ್ನೂ ಕೊಲ್ಲಬೇಕೆಂಬ ಪಿತೂರಿಯ ನಾಯಕರುಗಳನ್ನು ಪೋರ್ಚುಗೀಸು ಅಧಿಕಾರಿಗಳು ಬಂಧಿಸಿದ್ದಾರೆ.

ಲಂಡನ್ 27— ಜಿನಿವಾದಲ್ಲಿ ಮೇ 12 ರಂದು ಪ್ರಾರಂಭವಾಗುವ ಅಣೋಸು ಸಂಬಂಧದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ತಾನು ಭಾಗವಹಿಸುವುದಾಗಿ ಭಾರತವು ಬ್ರಿಟನ್ನಿಗೆ ಅಧಿಕೃತವಾಗಿ ತಿಳಿಸಿದೆ.

ನವದೆಹಲಿ 27— ದಂಗಗೋರ ನಾಗಾಗಳು ಸದ್ಭಾವನೆ ಪಡೆಯಲು ಆಚಾರ್ಯ ಭಾವೆಯವರ ನೆರವನ್ನು ಪಡೆಯಬೇಕೆಂದು ಲೋಕಸಭೆಯಲ್ಲಿ ಸದಸ್ಯರೊಬ್ಬರು ಮಾಡಿದ ಸಲಹೆಯನ್ನು ಪಂಡಿತ ನೆಹರು ಒಪ್ಪಲಿಲ್ಲ

ನವದೆಹಲಿ 27 — ಲೋಕಸಭೆಯ ಸದಸ್ಯರು ಲಾಯರುಗಳಿಗೆ ಸ್ಟ್ಯಾಂಪು ಡ್ಯೂಟಿ ವಿಧಿಸಬಾರದೆಂದು ತಿಳಿಸಿರುವ ಅಭಿಪ್ರಾಯವನ್ನು ರಾಜ್ಯ ಸರಕಾರಗಳ ಗಮನಕ್ಕೆ ತರುವಂತೆ ನಾಯಾಂಗ ಸಚಿವಾಲಯಕ್ಕೆ ಸೂಚಿಸಿದೆ.

ಜೋಹನ್ಸಬರ್ಗ್ 27— ಅಂಗೋಲದಲ್ಲಿನ ಅಫ್ರಿಕನ್ನರ ದೌರ್ಜನ್ಯ ಗಲಭೆಗಳಲ್ಲಿ ಸುಮಾರು ಪಾವರ ಮಂದಿ ಶ್ವೇತೀಯರು ಕೊಲ್ಲಲ್ಪಟ್ಟಿರುವರೆಂದು ವರದಿಯಾಗಿದೆ

ಬೆಂಗಳೂರು 27— ರಾಜ್ಯಾಂಗದಂತೆ ಸರ್ವತ್ರಿಕ ಚುನಾವಣೆ ನಿಮಯದಲ್ಲಿ ಮಂತ್ರಿಮಂಡಲ ರಾಜೀನಾಮೆ ಕೊಡಬೇಕಾಗಿಲ್ಲವೆಂದು ಶಾಸನ ಸಭೆಯಲ್ಲಿ ಮುಖ್ಯಮಂತ್ರಿಗಳು ತಿಳಿಸಿದರು.

ಜುನಾವಣಾ ವಿಚಾರ

ನವದೆಹಲಿ 25— ಮುಂದಿನ ಸಾರ್ವತ್ರಿಕ ಚುನಾವಣೆಗಳಿಗಾಗಿ ಕೈಗೊಳ್ಳ ಕಟ್ಟುನಿಟ್ಟಿನ ಸಿದ್ಧತೆಗಳನ್ನು ರಾಜ್ಯಗಳ ಮುಖ್ಯ ಚುನಾವಣಾಧಿಕಾರಿಗಳು ಏಪ್ರಿಲ್ 28 ರಿಂದ ಮೇ 1 ರವರೆಗೆ ಸೈನಿಟೋರಿಯಲ್ಲಿ ಸಮಾವೇಶಗೊಂಡಾಗ ಪರಿಶೀಲಿಸುವರು — ಮುಂದಿನ ಸಾರ್ವತ್ರಿಕ ಚುನಾವಣೆಗಳು 1962 ರ ಮಾರ್ಚ್ ಆರಂಭದಲ್ಲಿ ನಡೆಯುವುದು. 5 ದಿನಗಳಲ್ಲಿ ಚುನಾವಣೆಗಳು ಮುಕ್ತಾಯವಾಗಲು ಆ ಮುಂದಿನ ಮೂರು ದಿನಗಳಲ್ಲಿ ಫಲಿತಾಂಶಗಳನ್ನು ಘೋಷಿಸಲಾಗುವುದು.

ಬಾಂಬಿಲೋ ಗ್ರಾಮ

ಸ್ವಿಸ್ಸಾ ಅರಣ್ಯ ಪ್ರದೇಶದಲ್ಲಿರುವ ಬಾಂಬಿಲ್ಲೋ ಗ್ರಾಮಕ್ಕೆ 1959 ರಲ್ಲಿ ಸ್ವಿಟ್ಜರ್‌ಲ್ಯಾಂಡಿನ ಪ್ರಥಮ ಗ್ರಾಮದ ಪ್ರಶಸ್ತಿ ಹಾಗೂ 1250 ರೂಗಳ ನಗದು ಬಹುಮಾನವನ್ನು ಕೂಡ ದೊರಕಿತು — ಇಂದು ಸ್ವಿಸ್ಸಾ ರಾಜ್ಯದ 4000 ಚಿಲ್ಲರೆ ಗ್ರಾಮಗಳ ಸ್ಪರ್ಧೆಯಲ್ಲಿ ಒಂದು ಎನ್ನುವ ಸ್ಥಾನ ಹೋಗಿ ಬಾಂಬಿಲ್ಲೋ ಗ್ರಾಮಕ್ಕೆ ಒಂದು ವಿಶಿಷ್ಟ ಸ್ಥಾನ ದೊರಕಿದೆ ; ಮತ್ತು ಇತರ ಗ್ರಾಮಗಳಿಗೆ ಅದು ಮಾರ್ಗದರ್ಶನ ನೀಡಬಲ್ಲಂತಹ ಒಂದು ಮಾದರಿ ಗ್ರಾಮವಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಸೋವಿಯೆತ್ ಆಸಕ್ತಿ

ದಿಲ್ಲಿ 15— ದಿಲ್ಲಿಯ ಮಹಾವಿದ್ಯಾಲಯದ ಶ್ರೀ ಶಾಮನಾಥಂ ಹಸ್ತದಿಂದ ಇಂದು ಇಲ್ಲಿಯ ತಿರುವಾಂಕೂರು ಭವನದಲ್ಲಿ 'ಭಾರತೀಯ ಸಂಸ್ಕೃತಿಯಲ್ಲಿ ಸೋವಿಯತ್ ಆಸಕ್ತಿ' ಎಂಬ ಪ್ರದರ್ಶನವನ್ನು ಉದ್ಘಾಟಿಸಲಾಯಿತು : ಭಾರತ ದೇಶವು ಸ್ವತಂತ್ರವಾದಾಗಿನಿಂದ ಭಾರತ-ಸೋವಿಯತ್ ಸಂಬಂಧಗಳ ಬೆಳವಣಿಗೆಯನ್ನು ತೋರಿಸುವ ಅನೇಕ ಚಿತ್ರಗಳೂ, ಪುಸ್ತಕಗಳೂ ಇಲ್ಲಿ ಪ್ರದರ್ಶಿತವಾಗಿವೆ ; ಭಗವದ್ಗೀತೆ, ಮನುಸ್ಮೃತಿ, ಧಮ್ಮಪದ, ಪಂಚತಂತ್ರ, ನಲದಮಯಂತಿ, ಸರ್ದಾರ್ ಬಾಬರ್ ನಾಮಾ, ತಿರುಕ್ಕುರಳ್ ಮೊದಲಾದ ಪುಸ್ತಕಗಳು ರಷ್ಯನ್ ಭಾಷೆಯಲ್ಲಿ ಇಲ್ಲಿ ಪ್ರದರ್ಶಿತವಾಗಿವೆ.

ಉತ್ತರ ಧ್ರುವ ಪ್ರದೇಶದಲ್ಲಿ ಪ್ರಥಮ ಶಿಶುವಿನ ಜನನ

ಮಾಸ್ಕೊ 19— ಪ್ರಪಂಚದ ಸದೂರೋತ್ತರ ಪ್ರದೇಶವಾದ ಫ್ರಾಂಜ್ ಜೋಸೆಫ್ ಭೂವಿಯು ಹೆಯಿಸ್ ದ್ವೀಪದಲ್ಲಿ, 80 ಸೆಂ. ಸಮಾನಾಂತರ ಅಕ್ಷಾಂಶ ರೇಖೆಗೆ ಉತ್ತರದಲ್ಲಿ, ಸೋವಿಯತ್ ದ್ರುವ ಸಮೀಕ್ಷಾಲಯದಲ್ಲಿರುವ ಮುಖ್ಯ ಖಗೋಲಶಿಲ್ಪಿಗಳಲ್ಲಿ ಒಬ್ಬರಾದ ಕೀರ್ ಗೋಬಿಯವರ ಪತ್ನಿ ಗಲೀನಾಗೋಬಿ ಮೊನ್ನೆ ಈ ಪ್ರಾಂತದ ಮೊದಲನೆ ಶಿಶುವಿಗೆ (ಹೆಣ್ಣು) ಜನ್ಮನೀಡಿದ್ದಾರೆ.

ವುಡ್‌ಲ್ಯಾಂಡ್ಸ್ 28-4-61 ನೇ ಶುಕ್ರವಾರದಿಂದ

.... ಬಾನಿ ರೂಪದ ಫಿಲ್ಮ್‌ಸ್ತಾನ್‌ನವರ ....

ಮಾ ನೂ ಮೆ (ಹಿಂದಿ)

ತಾರಾಗಣ— ಹನಿ ಇರಾನಿ ಸದೋತ್ ಇರಾನಿ, ಅಜೀಜ್, ಅಶೋಕ್ ಕುಮಾರ್

★ ಪ್ರದರ್ಶಿಸಿದ ಕಡೆಗಳೆಲ್ಲಾ ಅಭೂತಪೂರ್ವವಾಗಿ ಹೊಗಳಿದ್ದಾರೆ ★

ದಿನವಹಿ 3 ಪ್ರದರ್ಶನಗಳು

ಆಪೆರಾ— 27-4-61 ರಿಂದ ಅಮೋಘ ಆರಂಭ

★ ಹೃದಯಂಗಮ ಸಂಗೀತಮಯ ಚಿತ್ರ ★

ರೇಶ್ಮೀ ರುಮಾಲ್ [ಹಿಂದಿ]

ಶಕೀಲ, ಮನೂಜ್, ಕೆ ಎಂ ಸಿಂಗ್, ಮುಮ್ತಾಜ್ ಹೆಲೆನ್, ಸುಲೋಚನ ಚಟರ್ಜಿ

ದಿನವಹಿ 3 ಆಟಗಳು

SHAKTI

SUDHA

A Superb Tonic

Help 'The Gorakshana'

Advertise in Goraksana and help the pious cause

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4



Our Bangalore Sales Depot address—

71/4 Arcot Srecnivasachar St., Bangalore 2.

Edited, Printed & Published by the Proprietor Dharma Prachara Nirata M. S. Krishna Rao, at the Satyavadi Press Chamarajapuram, Mysore-4